ನವಜಾತ ಶಿಶುಗಳು ಮತ್ತು ಗರ್ಭಿಣಿ ಸ್ತ್ರೀಯರ ಸಾವುಗಳು

500(288); ಶ್ರೀ. ಗುರುಪಾದಪ್ಪ ನಾಗಮಾರಪಳ್ಳಿ (ಬೀದರ್)

ಅ) 2012–13 ನೇ ಸಾಲಿನಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸಂಭವಿಸಿರುವ ನವಜಾತ ಶಿಶುಗಳು ಮತ್ತು ಗರ್ಭಿಣಿ ಸ್ತ್ರೀಯರ ಮರಣದ ಸಂಖ್ಯೆ ಎಷ್ಟು;

ಆ) ಇತ್ತೀಚಿನ ವರ್ಷಗಳಲ್ಲಿ ನವಜಾತ ಶಿಶುಗಳು ಮತ್ತು ಗರ್ಭಿಣಿ ಸ್ತ್ರೀಯರ ಮರಣವು ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು;

ಇ) ನವಜಾತ ಶಿಶುಗಳು ಮತ್ತು ಗರ್ಭಿಣಿ ಸ್ತ್ರೀಯರ ಮರಣವನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು,

ಈ) ಗರ್ಭಿಣಿ ಸ್ತ್ರೀಯರಿಗೆ ಸರ್ಕಾರ ಯಾವ ಯಾವ ಯೋಜನೆ ರೂಪಿಸಿದೆ;

ಉ) ಹಾಗಿದ್ದಲ್ಲಿ, ಎರಡು ವರ್ಷಗಳಲ್ಲಿ ಪ್ರತಿ ಜಿಲ್ಲೆಗೆ ವೆಚ್ಚ ಮಾಡಲಾದ ಹಣವೆಷ್ಟು?

ಶ್ರೀ ಯು.ಟಿ ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) 2012–13ನೇ ಸಾಲಿನಲ್ಲಿ ರಾಜ್ಯದಾದ್ಯಂತ ವಿವಿಧ ಜಿಲ್ಲೆಗಳಲ್ಲಿ ಒಟ್ಟು 816 ತಾಯಿ ಮರಣಗಳು ಮತ್ತು 12949 ಶಿಶು ಮರಣಗಳು ಸಂಭವಿಸಿರುತ್ತವೆ.

ಆ) ಇಲ್ಲ,

2017 ರಿಂದ IMR ಮತ್ತು MMR ಗಣನೀಯವಾಗಿ ಕಡಿಮೆಯಾಗಿದೆ.

	SRS 2007	SRS 2008	SRS 2009	SRS 2010	SRS 2011	SRS 2012
ಶಿಶು ಮರಣ ಪ್ರಮಾಣ	47	45	41	38	35	32

ಇ) **ತಾಯಿ ಮರಣ ಪ್ರಮಾಣವನ್ನು ಕಡಿಮೆ ಮಾಡಲು ತೆಗೆದುಕೊಂಡಿರುವ ಕ್ರಮಗಳು:**

- ಮಹಿಳೆಯು ಗರ್ಭಿಣಿಯೆಂದು ತಿಳಿದ ಕೂಡಲೇ ತಾಯಿ ಕಾರ್ಡ ನೀಡಿ ಆಕೆಯನ್ನು ನೋಂದಣಿ ಮಾಡಲಾಗುವುದು
- ನೋಂದಣಿಯಾಧ ನಂತರ ಆಕೆಗೆ ವೈದ್ಯಕೀಯ ತಪಾಸಣೆ, ಚುಚ್ಚುಮದ್ದು ಹಾಗೂ ಅಗತ್ಯ ಪೌಷ್ಟಿಕಾಂಶದ ಆಹಾರದ ಬಗ್ಗೆ ತಿಳುವಳಿಕೆಯನ್ನು ಸಂಬಂಧಪಟ್ಟ ಕ್ಷೇತ್ರದ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯು ಅರಿವು ಮೂಡಿಸುವರು.
- ಪ್ರತಿಯೊಬ್ಬ ಗಭಿಣಿ ಸ್ತ್ರೀಯರಿಗೆ 100 ಕಬ್ಬಿಣಾಂಶದ ಮಾತ್ರೆಗಳನ್ನು ವಿತರಿಸಲಾಗುವುದು.
- ಒಂದು ವೇಳೆ ಗರ್ಭಿಣಿಯು ರಕ್ತ ಹೀನತೆಯಿಂದ ಬಳಲುತ್ತಿದ್ದರೆ ಅಂತಹವರಿಗೆ 100 ಕಬ್ಬಿಣಾಂಶದ ಮಾತ್ರೆಗಳೊಂದಿಗೆ ಹೆಚ್ಚುವರಿಯಾಗಿ 100 ಕಬ್ಬಿಣಾಂಶದ ಮಾತ್ರೆಗಳನ್ನು ನೀಡಲಾಗುವುದು.
- ಗರ್ಭಿಣಿಗೆ ಆರೋಗ್ಯ ಸಂಸ್ಥೆಗಳಲ್ಲಿ ಹೆರಿಗೆಯನ್ನು ಮಾಡಿಸಿಕೊಳ್ಳುವುದರಿಂದ ಆಗುವ ಪ್ರಯೋಜನಗಳ ಬಗ್ಗೆ ಅರಿವು ಮೂಡಿಸಲಾಗುವುದು.
- ಸರ್ಕಾರಿ ಆಸ್ಪತ್ರೆಯಲ್ಲಿ ಹೆರಿಗೆ ಮಾಡಿಸಿಕೊಳ್ಳುವ ಫಲಾನಿಭವಿಗಳಿಗೆ ಜನನಿ ಶಿಶು ಸುರಕ್ಷಾ ಕಾರ್ಯಕ್ರಮದಡಿಯಲ್ಲಿ ಈ ಕೆಳಕಂಡವುಗಳನ್ನು ಉಚಿತವಾಗಿ ನೀಡಲಾಗುತ್ತಿದೆ.
- ವೈದ್ಯಕೀಯ ತಪಾಸಣೆ ಮತ್ತು ಔಷಧಗಳು
- ಆಸ್ಪತ್ರೆಯಲ್ಲಿ 48 ಘಂಟೆಗಳ ಕಾಲ ಉಳಿದುಕೊಳ್ಳುವ ಸಲುವಾಗಿ ಉಚಿತ ಊಟದ ವ್ಯವಸ್ಥೆ.
- ಗರ್ಭಾವಸ್ಥೆಯಲ್ಲಿರುವ ಸಂದರ್ಭದಲ್ಲಿ ಅಗತ್ಯ ಪ್ರಯೋಗಾಶಾಲಾ ಸೇವೆಗಳನ್ನು ಉಚಿತವಾಗಿ ಮಾಡಲಾಗುತ್ತದೆ.

- ರಕ್ತದ ಅವಶ್ಯಕತೆಯಿದ್ದಲ್ಲಿ ಉಚಿತವಾಗಿ ರಕ್ತವನ್ನು ನೀಡಲಾಗುತ್ತದೆ.
- ಗರ್ಭಿಣಿ ಸ್ತ್ರೀಯನ್ನು ಮನೆಯಿಂದ ಆಸ್ಪತ್ರೆಗೆ ರವಾನಿಸಲು ಮತ್ತು ಆಸ್ಪತ್ರೆಯಿಂದ ಮೇಲ್ದರ್ಜೆ ಆಸ್ಪತ್ರೆಗೆ ರವಾನಿಸಲು 108 ಉಚಿತ ವಾಹನದ ವ್ಯವಸ್ಥೆಯಿದೆ.

ಈ) ಸರ್ಕಾರಿ ಆಸ್ಪತ್ರೆಯಲ್ಲಿ ಹೆರಿಗೆ ಮಾಡಿಸಿಕೊಂಡಲ್ಲಿ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುವುದು.

- **ಪ್ರಸೂತಿ ಆರೈಕೆ:** ಮಹಿಳೆಯು ಗರ್ಭಾವಸ್ಥೆಯ ಎರಡನೇ ತ್ರೈಮಾಸಿಕದಲ್ಲಿ ಪೌಷ್ಟಿಕ ಆಹಾರದ ಸೇವನೆಗಾಗಿ ₹ 1000/- ಆರ್ಥಿಕ ಸಹಾಯ ಧನವನ್ನು ಹಾಗೂ ಹೆರಿಗೆಯಾದ ನಂತರ ಶಿಶುವಿನ ಆರೈಕೆಗಾಗಿ ₹ 1000/- ಗಳನ್ನು (ಜೆ.ಎಸ್.ವೈ. ಆರ್ಥಿಕ ಸಹಾಯದೊಂದಿಗೆ) ನೀಡಲಾಗುತ್ತಿದೆ.
- **ಮಡಿಲು:** ಸರ್ಕಾರಿ ಆಸ್ಪತ್ರೆಯಲ್ಲಿ ಹೆರಿಗೆ ಮಾಡಿಸಿಕೊಂಡ ಬಿ.ಪಿಎಲ್./ಎಸ್.ಸಿ/ಎಸ್ ಟಿ ಮಹಿಳೆಯರಿಗೆ ಮೊದಲ ಎರಡು ಜೀವಂತ ಜನನಗಳಿಗೆ ಬಾಣಂತಿ ಹಾಗೂ ನವಜಾತ ಶಿಶುವಿನ ಆರೈಕೆಗಾಗಿ 19 ಸಾಮಗ್ರಿಗಳುಳ್ಳ ಒಂದು ಕಿಟ್ಟನ್ನು ವಿತರಿಸಲಾಗುವುದು.
- **ತಾಯಿ ಭಾಗ್ಯ:** ರಾಜ್ಯದ 7 ಹಿಂದುಳಿದ ಜಿಲ್ಲೆಗಳಾದ ಬಾಗಲಕೋಟೆ, ಬಿಜಾಪುರ, ಬೀದರ್, ಗುಲ್ಬರ್ಗಾ, ಯಾದಗಿರಿ, ರಾಯಚೂರು, ಕೊಪ್ಪಳ ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಸರ್ಕಾರಿ–ಖಾಸಗಿ ಸಹಭಾಗಿತ್ವದಲ್ಲಿ ಉಚಿತ ಹೆರಿಗೆ ಸೇವೆಯನ್ನು ನೀಡಲಾಗುತ್ತಿದೆ.
- **ತಾಯಿ ಭಾಗ್ಯ ಪ್ಲಸ್:** ಮಹಿಳೆಯು ನೊಂದಾಯಿತ ಖಾಸಗಿ ಆಸ್ಪತ್ರೆಯಲ್ಲಿ ಹೆರಿಗೆ ಮಾಡಿಸಿಕೊಂಡಲ್ಲಿ ಅಂತಹ ಮಹಿಳೆಗೆ ₹ 1000/–ಗಳ ಆರ್ಥಿಕ ಸಹಾಯಧನವನ್ನು ನೀಡಲಾಗುತ್ತಿದೆ.

ಮೇಲಿನ ಎಲ್ಲಾ ಯೋಜನೆಗಳು ಬಿ.ಪಿ.ಎಲ್./ಎಸ್.ಸಿ./ಎಸ್.ಟಿ ಕುಟುಂಬದವರು ಫಲಾನುಭವಿಗಳಾಗಿರುತ್ತಾರೆ. ಹಾಗೂ ಎರಡು ಜೀವಂತ ಜನನಗಳಿಗೆ ಸೀಮಿತವಾಗಿರುತ್ತದೆ. **ಜನನಿ ಸುರಕ್ಷಾ ಯೋಜನೆ:** ಇದು ಭಾರತ ಸರ್ಕಾರದ ಯೋಜನೆಯಾಗಿದ್ದು, ಈ ಯೋಜನೆಯಡಿಯಲ್ಲಿಯೂ ಸಹ ಫಲಾನುಭವಿಗೆ ಈ ಕೆಳಕಂಡಂತೆ ಆರ್ಥಿಕ ಸಹಾಯವನ್ನು ನೀಡಲಾಗುತ್ತಿದೆ.

- **ಜನನಿ ಸುರಕ್ಷಾ ಯೋಜನೆ:** ಇದು ಭಾರತ ಸರ್ಕಾರದ ಯೋಜನೆಯಾಗಿದ್ದು, ಈ ಯೋಜನೆಯಡಿಯಲ್ಲಿಯೂ ಸಹ ಫಲಾನುಭವಿಗೆ ಈ ಕೆಳಕಂಡಂತೆ ಆರ್ಥಿಕ ಸಹಾಯವನ್ನು ನೀಡಲಾಗುತ್ತಿದೆ.
    - ಮನೆಯಲ್ಲಿ ಹೆರಿಗೆಯಾದರೆ: ₹ 500/-
    - ಆಸ್ಪತ್ರೆಯಲ್ಲಿ ಹೆರಿಗೆಯಾದರೆ:
        - ಗ್ರಾಮಿಣ ಪ್ರದೇಶದಲ್ಲಿ: ₹ 700/-
        - ನಗರ ಪ್ರದೇಶದಲ್ಲಿ: ₹ 600/-
    - ನೊಂದಾಯಿತ ಖಾಸಗಿ ಆಸ್ಪತ್ರೆಯಲ್ಲಿ ಸಿಸೇರಿಯನ್ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಲ್ಲಿ ₹ 1500/-
- **ಜನನಿ ಶಿಶು ಸುರಕ್ಷಾ ಯೋಜನೆ:** ಈ ಯೋಜನೆಯು ಭಾರತ ಸರ್ಕಾರದ ಯೋಜನೆಯಗಿದ್ದು, ಈ ಯೋಜನೆಯಡಿಯಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿ ಹೆರಿಗೆಗಾಗಿ ಬರುವ ಎಲ್ಲಾ ವರ್ಗದ ಗರ್ಭಿಣಿ ಮಹಿಳೆಯರಿಗೆ ಉಚಿತವಾಗಿ ಈ ಕೆಳಕಂಡ ಸೌಲಭ್ಯವನ್ನು ನೀಡಲಾಗುತ್ತಿದೆ.
    - ವೈದ್ಯಕೀಯ ತಪಾಸಣೆ ಮತ್ತು ಔಷಧಗಳು
    - ಆಸ್ಪತ್ರೆಯಲ್ಲಿ 48 ಘಂಟೆಗಳ ಕಾಲ ಉಳಿದುಕೊಳ್ಳುವ ಸಲುವಾಗಿ ಉಚಿತ ಊಟದ ವ್ಯವಸ್ಥೆ.

- ಗರ್ಭಾವಸ್ಥೆಯಲ್ಲಿರುವ ಸಂದರ್ಭದಲ್ಲಿ ಅಗತ್ಯ ಪ್ರಯೋಗಶಾಲಾ ಸೇವೆಗಳನ್ನು ಉಚಿತವಾಗಿ ಮಾಡಲಾಗುತ್ತದೆ.
- ರಕ್ತದ ಅವಶ್ಯಕತೆಯಿದ್ದಲ್ಲಿ ಉಚಿತವಾಗಿ ರಕ್ತವನ್ನು ನೀಡಲಾಗುತ್ತದೆ.
- ಗರ್ಭಿಣಿ ಸ್ತ್ರೀಯನ್ನು ಮನೆಯಿಂದ ಆಸ್ಪತ್ರೆಗೆ ರವಾನಿಸಲು ಮತ್ತು ಆಸ್ಪತ್ರೆಯಿಂದ ಮೇಲ್ದರ್ಜೆ ಆಸ್ಪತ್ರೆಗೆ ರವಾನಿಸಲು 108 ಉಚಿತ ವಾಹನದ ವ್ಯವಸ್ಥೆಯಿದೆ.

ಶಿಶು ಮರಣ ಪ್ರಮಾಣವನ್ನು ಕಡಿಮೆ ಮಾಡಲು ತೆಗೆದುಕೊಂಡಿರುವ ಕ್ರಮಗಳು:

ಫೆಸಿಲಿಟಿ ಬೇಸ್ಡ್ ಐ.ಎಂ.ಎನ್ ಸಿ.ಐ.

- **ನವಜಾತ ಶಿಶುಗಳ ಆರೈಕೆ ಕೇಂದ್ರ (ಎನ್.ಬಿ.ಸಿ.ಸಿ.)**

  24x7 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ನವಜಾತ ಶಿಶುಗಳ ಸಾಮಾನ್ಯ ನಿರ್ವಹಣೆಗಾಗಿ ನವಜಾತ ಶಿಶು ಆರೈಕೆಗಾಗಿ ಹೆರಿಗೆ ಕೊಠಡಿಯಲ್ಲಿ ಪ್ರತ್ಯೇಕ ಸ್ಥಳದಲ್ಲಿ ಮಗುವನ್ನು ಬೆಚ್ಚಗಿಡಲು ರೇಡಿಯಂಟ್ ವಾರ್ಮರ್ ಸೌಲಭ್ಯ ಒದಗಿಸಲಾಗಿದೆ. ಹಾಗೂ ಪ್ರಸವ ಸಮಯದಲ್ಲಿ ಉಸಿರುಗಟ್ಟುವಿಕೆಯಾದಲ್ಲಿ ಚಿಕಿತ್ಸೆ ನೀಡಲು ಅಗತ್ಯ ಉಪಕರಣ ಹಾಗೂ ಆಕ್ಸಿಜನ್ ಸೌಲಭ್ಯವನ್ನು ನೀಡಲಾಗಿರುತ್ತದೆ. ವೈದ್ಯರು ಹಾಗೂ ಶುಶ್ರೂಷಕರಿಯರೆಗೆ ಅಗತ್ಯ ತರಬೇತಿಯನ್ನು ನೀಡಲಾಗುತ್ತಿದೆ. 2011–12 ನೇ ಸಾಲಿನಲ್ಲಿ 994 24X7 ಪ್ರಾಥಮಿಕ ಹಾಗೂ ಆರೋಗ್ಯ ಕೇಂದ್ರಗಳಲ್ಲಿ ಈ ಸೌಲಭ್ಯ ಒದಗಿಸಲಾಗಿದೆ. ಇದಲ್ಲದೇ ರಾಜ್ಯದ ಎಲ್ಲಾ ಎಫ್.ಆರ್.ಯು ಹಾಗೂ ಜಿಲ್ಲಾ ಮಟ್ಟದ ಆಸ್ಪತ್ರೆಗಳಲ್ಲಿಯೂ ಹೆರಿಗೆ ಕೊಠಡಿ ಹಾಗೂ ಶಸ್ತ್ರ ಚಿಕಿತ್ಸೆ ಕೊಠಡಿಗಳಲ್ಲಿ ಈ ಸೌಲಭ್ಯಗಳನ್ನು ಒದಗಿಸಲಾಗಿದೆ.

- **ನವಜಾತ ಶಿಶುಗಳ ಅವಲೋಕನ ಘಟಕ (ಎನ್.ಬಿ.ಎಸ್.ಯು.)** ಸಮುದಾಯ ಆರೋಗ್ಯ ಕೇಂದ್ರ ಹಾಗೂ ತಾಲ್ಲೂಕು ಆಸ್ಪತ್ರೆಗಳಿಗೆ ನವಜಾತ ಶಿಶು ಆರೈಕೆ ಯೋಜನೆ ಜನನ ಸಮಯದಲ್ಲಿ ತೊಂದರೆಗೊಳಗಾಗುವ ಮಕ್ಕಳನ್ನು ಅಗತ್ಯ ತುರ್ತು ಚಿಕಿತ್ಸೆ ನೀಡಲಾಗವುದು. ಇದಲ್ಲದೇ ನವಜಾತ ಶಿಶುವಿನಲ್ಲಿ ಕಾಣುವ ಜಾಂಡೀಸ್ ಖಾಯಿಲೆಗೆ ಅಗತ್ಯವಿರುವ ಫೋಟೋಥೆರೆಪಿ ಚಿಕಿತ್ಸೆಯನ್ನು ನೀಡಲು ಉಪಕರಣಗಳನ್ನು ಒದಗಿಸಲಾಗಿದೆ. 2011–12ನೇ ಸಾಲಿನಲ್ಲಿ 192 ಎನ್.ಬಿ.ಎಸ್.ಯು.ಗಳನ್ನು ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಸ್ಥಾಪಿಸಲಾಗಿರುತ್ತದೆ.
- **ನವಜಾತ ಶಿಶುಗಳ ಚಿಕಿತ್ಸಾ ಘಟಕ (ಎನ್.ಎಸ್.ಸಿ.ಯು.)** ಅನಾರೋಗ್ಯದಿಂದ ಬಳಲುವ ಮಕ್ಕಳಿಗೆ ದಿನದ 24 ಗಂಟೆ ಚಿಕಿತ್ಸೆ ನೀಡಲು 33 ಜಿಲ್ಲಾಮಟ್ಟದ ಆಸ್ಪತ್ರೆಗಳಲ್ಲಿ ಶಸ್ತ್ರ ಚಿಕಿತ್ಸೆ ಹಾಗೂ ವೆಂಟಿಲೇಟರ್ ಸೌಲಭ್ಯ ಹೊರತುಪಡಿಸಿ ಇನ್ನೆಲ್ಲಾ ಉಳಿದ ಚಿಕಿತ್ಸೆಗಳನ್ನು ನೀಡಲಾಗುತ್ತದೆ.
- **ಜನನಿ ಶಿಶು ಸುರಕ್ಷಾ ಯೋಜನೆ (ಜೆ.ಎಸ್.ಎಸ್.ಕೆ.):** 2011–12ರಲ್ಲಿ ಯೋಜನೆ ಅನುಷ್ಠಾನಗೊಳಿಸಲಾಗಿದೆ. ನವಜಾತ ಶಿಶುಗಳಿಗೆ 30 ದಿನಗಳವರೆಗೆ ಉಚಿತ ತಪಾಸಣೆ ಒಳರೋಗಿ ದಾಖಲಾತಿ ಸಂಬಂಧಪಟ್ಟ ಪರೀಕ್ಷೆ ಚಿಕಿತ್ಸೆ ಒದಗಿಸಲಾಗುವುದು. ಮನೆಯಿಂದ ಆಸ್ಪತ್ರೆಗೆ, ಆಸ್ಪತ್ರೆಯಿಂದ ಆಸ್ಪತ್ರೆಗೆ ಹೆಚ್ಚಿನ ಚಿಕಿತೆಗಾಗಿ ವಾಹನ ವ್ಯವಸ್ಥೆ ಕೂಡ ಉಚಿತವಾಗಿದೆ.
- ಮನೆಮಟ್ಟದಲ್ಲಿ ನವಜಾತ ಶಿಶು ಆರೈಕೆ ಯೋಜನೆ (ಹೆಚ್.ಬಿ.ಎನ್.ಸಿ.)

ಆರೋಗ್ಯ ಕಾರ್ಯಕರ್ತೆಯರು ಮತ್ತು ಆಶಾ ಕಾರ್ಯಕರ್ತೆಯರು ಮನೆ ಭೇಟಿ ನೀಡಿ ನವಜಾತ ಶಿಶುಗಳನ್ನು ಕನಿಷ್ಠ 6 ಬಾರಿ ಶಿಶುವಿನಲ್ಲಿ ಕಂಡು

ಬರುವ ಅನಾರೋಗ್ಯದ ಸೂಚನೆಗಳನ್ನು ಗುರುತಿಸಿ ಸಕಾಲದಲ್ಲಿ ಸೂಕ್ತ ಆಸ್ಪತ್ರೆಗಳಿಗೆ ಕರೆದೊಯ್ಯುತ್ತಿದ್ದಾರೆ ಮತ್ತು ಎದೆ ಹಾಲಿನ ಬಗ್ಗೆ ವಿವರವಾದ ತಿಳುವಳಿಕೆಯನ್ನು ನೀಡುತ್ತಿದ್ದಾರೆ. ಏಕೆಂದರೆ ಮಗು 6 ತಿಂಗಳವರೆಗೆ ಎದೆ ಹಾಲನ್ನು ಕುಡಿದರೆ ಮಗುವಿಗೆ ಪ್ರತಿರೋಧಕ ಶಕ್ತಿ ಹೆಚ್ಚಾಗಿ ಸೋಂಕುಗಳನ್ನು ತಡೆಗಟ್ಟುವಲ್ಲಿ ಯಶಸ್ವಿಯಾಗುತ್ತದೆ.

ಕೆಲವೊಮ್ಮೆ ಹುಟ್ಟಿನಿಂದ ಬರುವ (Major congenital anamaly) ಗಂಡಾಂತರ ಕಾಯಿಲೆಗಳಿಂದ ಶಿಶು ಮರಣದ ಪ್ರಮಾಣವನ್ನು ಕಡಿಮೆ ಮಾಡಲು ಬರುವುದಿಲ್ಲ.

ಊ) ರಾಜ್ಯದಲ್ಲಿ ಎರಡು ವರ್ಷಗಳಲ್ಲಿ ಪ್ರತಿ ಜಿಲ್ಲೆಗೆ ವೆಚ್ಚ ಮಾಡಲಾದ ಹಣದ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ

ಕಾಲೇಜುಗಳಿಗೆ ಕೇಂದ್ರ ಸರ್ಕಾರದ ಅನುದಾನ

501(967); ಶ್ರೀ ಹ್ಯಾರಿಸ್ ಎನ್.ಎ. (ಶಾಂತಿ ನಗರ)

ಅ) ರಾಜ್ಯದಲ್ಲಿ ಹೊಸ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ಮೇಲ್ದರ್ಜೆಗೇರಿಸುವ ಉದ್ದೇಶ ಸರ್ಕಾರದ ಮುಂದಿದೆಯೇ;

ಆ) ಕಳೆದ ಮೂರು ವರ್ಷಗಳಲ್ಲಿ ನೂತನ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲು ಕೇಂದ್ರ ಸರ್ಕಾರದಿಂದ ಮಂಜೂರಾದ ಅನುದಾನವೆಷ್ಟು; (ವಿವರ ನೀಡುವುದು)

ಇ) ಸದರಿ ಕೇಂದ್ರ ಸರ್ಕಾರದ ಅನುದಾನವನ್ನು ಸಮರ್ಥವಾಗಿ ಬಳಸಿಕೊಳ್ಳಲಾಗಿದೆಯೇ, (ವಿವರ ನೀಡುವುದು);

ಈ) ಹೊಸ ವೈದ್ಯ ಕಾಲೇಜುಗಳಲ್ಲಿ ಪ್ರಸ್ತುತ ಖಾಲಿ ಇರುವ ವೈದ್ಯರುಗಳ ಮತ್ತು ಉಪನ್ಯಾಸಕರುಗಳ ಹುದ್ದೆಗಳೆಷ್ಟು; ಅವುಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಡಾ: ಶರಣಪ್ರಕಾಶ್ ಆರ್. ಪಾಟೀಲ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು)